**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ</u>**

**<u>ಸಿಸಿ ನಂಃ 53/2024</u>**

**ಪಿರ್ಯಾದಿ** : ಕರ್ನಾಟಕ ಸರ್ಕಾರ,
ಹಲಗೂರು ಪೋಲೀಸ್ ಠಾಣೆ ಮುಖೇನ.

- ವಿರುದ್ದ -

**ಆರೋಪಿ** : ನಿತೀಶ್ ಕುವಾರ್ ಬಿನ್ ಹರೇಂದ್ರಸಿಂಗ್,
**ವಯಸ್ಸು** 28 ವರ್ಷ,
ಸೈಟ್ ಇಂಜಿನಿಯರ್, ಪ್ರೊಜೆಕ್ಟ ಅಪೀಸ್,
ಸಾತನೂರು, ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

**<u>ಆರೋಪಣೆ</u>**

ದಿನಾಂಕ **17.08.2023** ರಂದು ರಾತ್ರಿ ಸುಮಾರು **9.45** ರ ಸಮಯದಲ್ಲಿ ಹಲಗೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಟಿ.ಕೆ.ಹಳ್ಳಿ ಗ್ರಾಮದ ಬಿ.ಡಬ್ಲೂ ್.ಯ .ಎಸ್.ಎಸ್.ಬಿ. ಮುಖ್ಯ ಗೇಟ್ ನೇರದಲ್ಲಿ ಹಾದು ಹೋಗಿರುವ ಮಳವಳ್ಳಿ ಕನಕಪುರ ರಸ್ತೆಯಲ್ಲಿ ಚಾಸಾ-1 ರವರ ಮಗ ಅಭಿಷೇಕ್ ರವರು ತನ್ನ ಬಾಬ್ತು ಕೆಎ-11-ಇಹೆಚ್-**4947** ನಂಬರಿನ ಮೋಟಾರ್ ಸೈಕಲನಲ್ಲಿ ಮಳವಳ್ಳಿ ಕಡೆಯಿಂದ ಕನಕಪುರ ಕಡೆಗಾದಂತೆ ಚಾಲನೆ ಮಾಡಿಕೊಂಡು ಬರುತ್ತಿದ್ದಾಗ ರಸ್ತೆಯಲ್ಲಿ ಹಾಕಿದ್ದ ಮಣ್ಣಿನ ಗುಂಡೆಯು ಸದರಿಯವರಿಗೆ ಕಾಣಿಸದೇ ಮೋಟಾರ್ ಸೈಕಲನ್ನು ಡಿಕ್ಕಿಪಡಿಸಿ ಮೋಟಾರ್ ಸೈಕಲ ಸಮೇತ ರಸ್ತೆಗೆ ಬಿದ್ದು ತಲೆಗೆ ಪೆಟ್ಟಾಗಿ ದಿನಾಂಕ **22.08.2023** ರಂದು ಮೃತರಾಗಿದ್ದು, ಆರೋಪಿಯಾದ ನಿಮ್ಮ ನಿರ್ಲಕ್ಷ್ಯತನ ಕಾಮಗಾರಿಯಿಂದ ಈ ಕೃತ್ಯ ಅಗಿರುತ್ತದೆ, ಆ ಮೂಲಕ ಅರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ **304**(ಎ) ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ದ ಆಪಾದಿಸಿದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿ ವಿವರಿಸಿದ ಆಪಾದನೆಯು ಅರ್ಥವಾಯಿತೇ ?

**<u>ಉತ್ತರಃ</u>**

ಪ್ರಶ್ನೆ. 2. ಆಪಾದನೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಬಯಸುತ್ತೀರಾ ?

**<u>ಉತ್ತರಃ</u>**

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿ ಸರಿಯಾಗಿರುತ್ತದೆಂದು ಈ ಮೂಲಕ ದೃಡೀಕರಿಸುತ್ತೇನೆ.)

ದಿನಾಂಕಃ 15.07.2025

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.**